
# ಆಲ್ಬರ್ಟ್ ಐನ್‌ಸ್ಟೈನ್ ಜೀವನದ ರಸಮಯ ಅನುಭವಗಳು

ಸ್ವಾಮಿ ರಾಘವೇಶಾನಂದ

ಶತಮಾನದ ಮಹಾವ್ಯಕ್ತಿ ಎಂದು ಪರಿಗಣಿಸಲ್ಪಟ್ಟಿರುವ ಆಲ್ಬರ್ಟ್ ಐನ್‌ಸ್ಟೈನ್‌ರವರ ಮನೋಜ್ಞ ವ್ಯಕ್ತಿತ್ವವನ್ನು ಸ್ವಾರಸ್ಯಕರ ಘಟನೆಗಳ ಮೂಲಕ ಈ ಲೇಖನದಲ್ಲಿ ಚಿತ್ರಿಸಲಾಗಿದೆ. ಸ್ವಾಮಿ ರಾಘವೇಶಾನಂದರು ಬೆಂಗಳೂರಿನ ಅಲಸೂರಿನಲ್ಲಿರುವ ವಿವೇಕಾನಂದ ಆಶ್ರಮದ ಅಧ್ಯಕ್ಷರಾಗಿರುವರು. ಈ ಲೇಖನ ಎ. ಎನ್. ಕೊಠಾರೆಯವರ ಆಂಗ್ಲಲೇಖನದ ಸಂಗ್ರಹಾನುವಾದ.

**ಭೌತ** ಸಿದ್ಧಾಂತಗಳನ್ನು ರಚಿಸುವುದರಲ್ಲಿ ಆಲ್ಬರ್ಟ್ ಐನ್‌ಸ್ಟೈನ್‌ರ ಚಾಣಾಕ್ಷತೆ, ಹಾಗೂ ನಿಪುಣತೆ ಅಸದೃಶವಾದುದು. ೧೯೦೫ರಲ್ಲಿ ಒಂದು ಭೌತಶಾಸ್ತ್ರ ಪತ್ರಿಕೆಯಲ್ಲಿ ಈತ ನಾಲ್ಕು ಅಮೂಲ್ಯವಾದ ಲೇಖನಗಳನ್ನು ಪ್ರಕಟಿಸಿದರು. ಸೋಜಿಗವೆಂದರೆ, ಅವರಿಗೆ "ಆ ಲೇಖನಗಳನ್ನು ಬರೆಯಲು ಕೇವಲ ಐದು ವಾರಗಳಷ್ಟೇ ಹಿಡಿಯಿತು" ಎಂದು ಅವರೇ ಹೇಳುತ್ತಾರೆ. ಇವರ ಸಾಪೇಕ್ಷ ಸಿದ್ಧಾಂತ ಜಗತ್ಪ್ರಸಿದ್ಧವಾದರೂ, ಇವರಿಗೆ ನೊಬೆಲ್ ಪಾರಿತೋಷಕ ದೊರೆತದ್ದು ಇವರ ಫೋಟೋ ವಿದ್ಯುತ್ ಪರಿಣಾಮ (*Photo Electric Effect*)ಎಂಬ ಸಂಶೋಧನೆಗಾಗಿ. ಇದನ್ನು ಇವರು ಆವಿಷ್ಕರಿಸಿದ್ದು ಸಾಮಾನ್ಯ ಗುಮಾಸ್ತನಂತೆ ಕೆಲಸ ಮಾಡುತ್ತಿದ್ದ ಕಾಲದಲ್ಲಿ.



ಒಬ್ಬ ವ್ಯಕ್ತಿಯ ಮೌಲ್ಯ ಅವನು ಏನು ನೀಡುತ್ತಾನೆ ಎಂಬುದನ್ನು ಅವಲಂಬಿಸಿದೆಯೇ ಹೊರತು ಅವನು ಏನನ್ನು ಪಡೆಯಬಲ್ಲ ಎಂಬುದನ್ನಲ್ಲ.
—ಆಲ್ಬರ್ಟ್ ಐನಸ್ಟೈನ್

ಅವರ ಬಾಲ್ಯ ಜೀವನ ಅಂತಹ ಆನಂದದಾಯಕವಾಗೇನೂ ಇರಲಿಲ್ಲ. ಅವರಿಗೂ ಅವರ ಉಪಾಧ್ಯಾಯರುಗಳಿಗೂ ಯಾವಾಗಲೂ ಮನಸ್ತಾಪವಿರುತ್ತಿತ್ತು. ಅದಕ್ಕೆ ಕಾರಣ ಅವರಲ್ಲಿದ್ದ ಅಸಾಧಾರಣವಾದ ಬುದ್ಧಿಮತ್ತೆ. ಒಮ್ಮೆಯಂತೂ ಒಬ್ಬರು ಉಪಾಧ್ಯಾಯರು ಆಲ್ಬರ್ಟ್‌ನನ್ನು ಕರೆದು ಹೇಳಿದರು, "ಇಲ್ಲಿ ನೋಡು, ನೀನು ಕೇಳುವ ಪ್ರಶ್ನೆಗಳಿಗೆಲ್ಲಾ ನನ್ನಲ್ಲಿ ಸಮರ್ಪಕವಾದ ಉತ್ತರವಿಲ್ಲ. ಹೀಗಾಗಿ ಉಳಿದ ವಿದ್ಯಾರ್ಥಿಗಳು ನನ್ನಲ್ಲಿ ಗೌರವ ಕಳೆದುಕೊಳ್ಳುತ್ತಿದ್ದಾರೆ. ನಾನು ನಿನಗೊಂದು ಸಲಹೆ ಕೊಡುತ್ತೇನೆ. ನಿನಗೆ ಪ್ರಾರಂಭಿಕ ವಿದ್ಯಾಭ್ಯಾಸದ ಅವಶ್ಯಕತೆಯಿಲ್ಲ. ನೀನು ಶಾಲೆಯನ್ನು ಬಿಟ್ಟುಬಿಡು. ಇದರಿಂದ ನೀನು ನನಗೆ ದೊಡ್ಡ ಉಪಕಾರ ಮಾಡಿದಂತಾಗುತ್ತದೆ."

ಬಹಳ ಬಡಕುಟುಂಬದಿಂದ ಬಂದ ಆಲ್ಬರ್ಟ್‌ರು ಒಂದು ಉದ್ಯೋಗ ದೊರಕಿಸಿಕೊಳ್ಳಲು ಹಲವಾರು ಕಷ್ಟಗಳನ್ನು ಅನುಭವಿಸಬೇಕಾಯಿತು. ಕೊನೆಗೆ ೧೯೦೨ರಲ್ಲಿ ಒಂದು ಪೇಟೆಂಟ್ಸ್ ಕಛೇರಿಯಲ್ಲಿ ಗುಮಾಸ್ತೆ ಕೆಲಸ ಸಿಕ್ಕಿತು. ಅವರಿಗೆ ಈ ಕೆಲಸ ತುಂಬ ಹಿಡಿಸಿತು. ಕಾರಣ ಒಂದು ದಿನದಲ್ಲಿ ಮಾಡಬೇಕಾದ ಕೆಲಸವನ್ನು ತಮ್ಮ ಕಾರ್ಯ ನೈಪುಣ್ಯತೆಯಿಂದ ಎರಡು ಘಂಟೆಗಳಲ್ಲೇ ಮುಗಿಸಿಬಿಡುತ್ತಿದ್ದರು. ಉಳಿದ ಸಮಯವನ್ನು ತಮಗೆ ಪ್ರಿಯವಾದ ಭೌತಶಾಸ್ತ್ರದ ಹಲವಾರು ಸಮೀಕರಣಗಳ ರಚನೆಗೆ ಉಪಯೋಗಿಸಿಕೊಳ್ಳುತ್ತಿದ್ದರು.

ಅವರ ವೈವಾಹಿಕ ಜೀವನ ಅಷ್ಟೊಂದು ಸುಖಮಯವಾಗಿರಲಿಲ್ಲ. ಸಾಪೇಕ್ಷ ಸಿದ್ಧಾಂತ ಅವರಿಗೆ ಬಹಳ ಗೌರವ ತಂದರೂ ಅದು ಅವರ ಸಾಂಸಾರಿಕ ಜೀವನದ ಮೇಲೆ ಯಾವ ಹಿತವಾದ ಪರಿಣಾಮವನ್ನೂ ಬೀರಿರಲಿಲ್ಲ. ಒಮ್ಮೆ ಅವರ ಸ್ನೇಹಿತರೊಬ್ಬರು ತಮ್ಮ ಅನುಭವವನ್ನು ಹೀಗೆ ವಿವರಿಸುತ್ತಾರೆ: "ನಾನು ಒಮ್ಮೆ ಅವರ ಮನೆಗೆ ಭೇಟಿಯಿತ್ತಿದ್ದೆ. ಬಾಗಿಲು ತೆರೆದಿತ್ತು. ಬಹುಶಃ ಆಲ್ಬರ್ಟ್‌ರೇ ಮನೆಯನ್ನು ಗುಡಿಸಿ, ಸಾರಿಸಿದ್ದರು. ಆ ಬಟ್ಟೆಯನ್ನು ಒಣಗಲು ಹಜಾರದಲ್ಲಿ ಹರಡಲಾಗಿತ್ತು. ನಾನು ಆಲ್ಬರ್ಟ್‌ರ ಕೊಠಡಿಗೆ ತಲೆಹಾಕಿ ಇಣುಕಿ ನೋಡಿದೆ. ಬಾಯಲ್ಲಿ ದೊಡ್ಡ ಸಿಗರೇಟಿನಿಂದ ಹೊಗೆ ಬರುತ್ತಿತ್ತು. ಅವರು ಸ್ಟೌವ್ ಮುಂದೆ ನಿಂತಿದ್ದರು. ಅದರಿಂದ ಭಯಂಕರ ಹೊಗೆ ಬರುತ್ತಿತ್ತು. ಒಂದು ಕೈ ತೊಟ್ಟಿಲು ತೂಗುವಂತಿತ್ತು, ಇನ್ನೊಂದರಲ್ಲಿ ಪುಸ್ತಕ. ಈ ವ್ಯಕ್ತಿ ಬಾಹ್ಯ ಪ್ರಪಂಚದ ಅರಿವೇ ಇಲ್ಲದೆ ತನ್ನ ಬೌದ್ಧಿಕ ಪ್ರಪಂಚದಲ್ಲಿ ವಿಹರಿಸುತ್ತಿದ್ದ."

ಒಮ್ಮೆ ಬೆಲ್ಜಿಯಂನ ರಾಣಿ, ಆಲ್ಬರ್ಟ್‌ರ ಮೇಧಾಶಕ್ತಿಯನ್ನು ಗೌರವಿಸಲು ತನ್ನ ರಾಜ್ಯಕ್ಕೆ ಆಮಂತ್ರಿಸಿದಳು. ಆಮಂತ್ರಣಕ್ಕೆ ಒಪ್ಪಿ ಅವರು ರೈಲಿನಲ್ಲಿ ಪ್ರಯಾಣ ಬೆಳೆಸಿದರು. ರೈಲ್ವೆ ನಿಲ್ದಾಣದಲ್ಲಿ ಇವರನ್ನು ಸ್ವಾಗತಿಸಲು ಗಣ್ಯವ್ಯಕ್ತಿಗಳ ತಂಡವೇ ನಿಂತಿರುವುದನ್ನು ನೋಡಿ ಬೆರಗಾದರು. ಒಂದು ಕೈಯಲ್ಲಿ ಹಳೆಯ

ಚೀಲ, ಮತ್ತೊಂದು ಕೈಯಲ್ಲಿ ಪಿಟೀಲು ಹಿಡಿದಿದ್ದ ಇವರನ್ನು ಯಾರೂ ಗುರುತಿಸಲಿಲ್ಲ. ಸರಸರನೆ ಹೊರಬಂದು ರಾಣಿಯ ಅರಮನೆಗೆ ನಡೆದುಕೊಂಡೇ ಹೊರಟರು. ಅವರನ್ನು ಸ್ವಾಗತಿಸಲು ಬಂದಿದ್ದವರೆಲ್ಲ ನಿರಾಶರಾಗಿ ಬಂದು ರಾಣಿಗೆ ಅವರು ಬರಲೇ ಇಲ್ಲ ಎಂದು ಹೇಳಿದರು. ಸ್ವಲ್ಪ ಹೊತ್ತಾದ ಮೇಲೆ ಅಸ್ತವ್ಯಸ್ತವಾಗಿ ಬಟ್ಟೆ ಧರಿಸಿದ್ದ ಆಲ್ಬರ್ಟ್ ಅಲ್ಲಿಗೆ ಬಂದು ತಮ್ಮ ಪರಿಚಯ ಹೇಳಿಕೊಂಡರು. ಆಗ ರಾಣಿ, "ಮಾನ್ಯರೇ, ನಾನು ತಮಗಾಗಿ ಕಳುಹಿಸಿದ್ದ ಅಲಂಕೃತ ಕಾರನ್ನು ಏಕೆ ಉಪಯೋಗಿಸಲಿಲ್ಲ?" ಎಂದಳು. ಅದಕ್ಕೆ ಆಲ್ಬರ್ಟ್ ವಿಜಯನಗೆ ಬೀರಿ "ಸಂಜೆಯಲ್ಲಿ ನಡೆದುಬರುವುದು ಆಪ್ಯಾಯಮಾನವಾಗಿತ್ತು" ಎಂದರು.

**ಯಶಸ್ವೀ ವ್ಯಕ್ತಿಯಾಗುವುದಕ್ಕೆ ಪ್ರಯತ್ನಿಸುವ ಬದಲು ಮೌಲ್ಯವಂತ ವ್ಯಕ್ತಿಯಾಗಲು ಪ್ರಯತ್ನಿಸಿ.**
***—ಆಲ್ಬರ್ಟ್ ಐನಸ್ಟೈನ್***

ಒಮ್ಮೆ ಒಂದು ಪಟವನ್ನು ಗೋಡೆಯಲ್ಲಿ ನೇತುಹಾಕಲು ಒಂದು ಹಳೆಯ ಏಣಿಯನ್ನು ಹತ್ತಿದರು. ತಮ್ಮ ತಲೆಯ ತುಂಬ ಯೋಚನೆಗಳನ್ನು ತುಂಬಿಕೊಂಡಿದ್ದ ಆಲ್ಬರ್ಟ್ ಕಾಲುಜಾರಿ ಕೆಳಗೆ ಬಿದ್ದರು. ಆಘಾತದಿಂದ ಅವಸರ ಅವಸರವಾಗಿ ಚೇತರಿಸಿಕೊಂಡು ಮೇಲೆದ್ದು, ತಕ್ಷಣ ಪೆನ್ಸಿಲ್, ಕಾಗದ ಹಿಡಿದು, ತಾವು ಬೀಳಲು ಕಾರಣವನ್ನು ಗುರುತುಹಾಕಿ ಲೆಕ್ಕಾಚಾರ ಹಾಕಲು ಶುರು ಮಾಡಿದರು. ಈ ಬೀಳುವಿಕೆ ಗುರುತ್ವಾಕರ್ಷಣ ಸಿದ್ಧಾಂತಕ್ಕೆ ನವವಿನ್ಯಾಸವನ್ನು ನೀಡಲು ಸಹಾಯ ಮಾಡಿತು.

೧೯೧೯ರ ಗ್ರಹಣದ ಸಮಯದಲ್ಲಿ ಅವರು ಪ್ರತಿಪಾದಿಸಿದ "ಬಾಗುವ ಕಿರಣಗಳ ಸಿದ್ಧಾಂತ "(*Theory of Bending of Light*) ಬಹಳ ನಿಖರವಾದುದೆಂದು ತೀರ್ಮಾನಿಸಲ್ಪಟ್ಟಿತು. ಆ ಗ್ರಹಣದ ಛಾಯಾ ಚಿತ್ರಗಳನ್ನು ವೀಕ್ಷಿಸುತ್ತಾ ಮುಖದಲ್ಲಿ ತುಂಟ ನಗೆಯಿಂದ ಹೇಳಿದರಂತೆ, "ಈಗ ನನ್ನ ಸಾಪೇಕ್ಷ ಸಿದ್ಧಾಂತ ಸರಿ ಎಂದು ಒಪ್ಪಿಗೆ ಪಡೆದಿದೆ. ಈಗ ಜರ್ಮನಿ ನನ್ನನ್ನು ತನ್ನ ಪ್ರಜೆ ಎಂದೂ ಫ್ರಾನ್ಸ್ ನನ್ನನ್ನು ವಿಶ್ವಪ್ರಜೆ ಎಂದೂ ಘೋಷಿಸಲು ಗುದ್ದಾಡುತ್ತಿವೆ. ಒಂದು ವೇಳೆ ಸಾಪೇಕ್ಷ ಸಿದ್ಧಾಂತ ತಪ್ಪಾಗಿದ್ದಲ್ಲಿ, ಫ್ರಾನ್ಸವರು ನನ್ನನ್ನು ಜರ್ಮನಿಯವನೆಂದೂ ಜರ್ಮನಿಯವರು ಯಹೂದ್ಯ ಪಂಗಡಕ್ಕೆ ಸೇರಿದವನೆಂದೂ ಸಾರುತ್ತಿದ್ದರು."

ಒಮ್ಮೆ ಒಂದು ಸಭೆಯಲ್ಲಿ ಆಲ್ಬರ್ಟ್‌ರನ್ನು ಸಾಪೇಕ್ಷ ಸಿದ್ಧಾಂತವನ್ನು ಸರಳವಾಗಿ ವಿವರಿಸಿ ಎಂದು ಕೇಳಿದರಂತೆ. ಹಾಸ್ಯ ಪ್ರವೃತ್ತಿಯ ಆಲ್ಬರ್ಟ್ ಹೇಳಿದರಂತೆ : "ನೋಡಿ, ಒಬ್ಬ ಯುವಕ ತನ್ನ ಪ್ರೇಯಸಿಯೊಂದಿಗೆ ಒಂದು ಘಂಟೆ ಕುಳಿತು ಕಾಲ ಕಳೆದರೂ ಅದು ಅವನಿಗೆ ಒಂದು ಸೆಕೆಂಡಿನಂತೆ ತೋರುತ್ತದೆ. ಆದರೆ ಅದೇ ಅವನು ಚೆನ್ನಾಗಿ ಕಾದ ಹೆಂಚಿನ ಮೇಲೆ ಒಂದು ಸೆಕೆಂಡು ಕುಳಿತರೂ ಅದು ಒಂದು ಘಂಟೆ ಕುಳಿತಂತೆ ಭಾಸವಾಗುತ್ತೆ. ಇದೇ ಸಾಪೇಕ್ಷ ಸಿದ್ಧಾಂತ."

ಒಮ್ಮೆ ಬರ್ಲಿನ್ ನಗರದ ಬಸ್ಸಿನಲ್ಲಿ ಪ್ರಯಾಣ ಮಾಡುತ್ತಿದ್ದಾಗ ಆಲ್ಬರ್ಟ್‌ರಿಗೆ ಕಂಡಕ್ಟರ್ ಚಿಲ್ಲರೆ ಕೊಟ್ಟಾಗ, ಅದು ಸರಿಯಾಗಿಲ್ಲ ಎಂದಿವರು ತಕರಾರು ಮಾಡಿದರಂತೆ. ಕಂಡಕ್ಟರ್ ಅವರ ಕೈಯಲ್ಲಿರುವ ಚಿಲ್ಲರೆ ಸರಿಯಾಗಿರುವುದನ್ನು ನೋಡಿ, ಸ್ಕೂಲಿಗೆ ಹೋಗಿ ಲೆಕ್ಕ ಕಲಿತುಕೊಳ್ಳಿ ಎಂದರಂತೆ. ಆಗ ಆಲ್ಬರ್ಟ್ ಮನಸಾರೆ ನಕ್ಕರಂತೆ.

ಆಲ್ಬರ್ಟ್ ಅಮೆರಿಕಕ್ಕೆ ಮೊದಲಬಾರಿ ಬಂದಾಗ ಪತ್ರಕರ್ತರು ಅವರನ್ನು ಮುತ್ತಿದರು. ಆದರೆ ಇವರು ಸ್ವಲ್ಪವೂ ಧೃತಿಗೆಡಲಿಲ್ಲ. ಪತ್ರಕರ್ತರು ಪ್ರಶ್ನೆಗಳ ಬಾಣಗಳನ್ನೇ ಬಿಡಲಾರಂಭಿಸಿದರು. ಇವರು ಸ್ವಲ್ಪವೂ ವಿಚಲಿತರಾಗದೆ ನಿರ್ಲಿಪ್ತತೆಯಿಂದ ಉತ್ತರಿಸುತ್ತಿದ್ದರು.

"ಅಮೆರಿಕದ ಬಗ್ಗೆ ನಿಮ್ಮ ಅಭಿಪ್ರಾಯವೇನು?"

"ನಾನು ಈ ದೇಶವನ್ನು ಇನ್ನೂ ನೋಡೇ ಇಲ್ಲ!"

"ಸಾಪೇಕ್ಷ ಸಿದ್ಧಾಂತವನ್ನು ಒಂದು ವಾಕ್ಯದಲ್ಲಿ ವಿವರಿಸಿ ಹೇಳುವಿರಾ?"

"ಇಲ್ಲ, ಆಗುವುದಿಲ್ಲ."

"ಸ್ತ್ರೀಯರಿಗೆ ನಿಮ್ಮ ಸಾಪೇಕ್ಷ ಸಿದ್ಧಾಂತ ಪ್ರಿಯವಾದುದಕ್ಕೆ ಕಾರಣವೇನು?"

"ಹೆಂಗಸರಿಗೆ ಹೊಸ ಫ್ಯಾಷನ್ ಮೇಲೆ ಯಾವಾಗಲೂ ವ್ಯಾಮೋಹ. ಈ ವರ್ಷದ ಹೊಸ ಫ್ಯಾಷನ್ ಸಾಪೇಕ್ಷ ಸಿದ್ಧಾಂತವಲ್ಲವೇ, ಅದಕ್ಕೇ! "

"ಕಾಲೇಜು ಶಿಕ್ಷಣ ನಿಜವಾಗಿ ಅವಶ್ಯಕವೇ? ಎಲ್ಲ ಮಾಹಿತಿಗಳನ್ನೂ ಪುಸ್ತಕಗಳಲ್ಲೇ ಪಡೆಯಬಹುದಲ್ಲಾ?"

"ನಿಜ, ನಾನು ಕೂಡ ಪುಸ್ತಕಗಳಲ್ಲಿ ದೊರೆಯುವ ಪುಟ್ಟ ಪುಟ್ಟ ಮಾಹಿತಿಗಳನ್ನು ಜ್ಞಾಪಕದಲ್ಲಿ ಇಟ್ಟುಕೊಳ್ಳಲು ಪ್ರಯತ್ನಿಸುವುದಿಲ್ಲ. ಆದರೆ ವಿದ್ಯಾಭ್ಯಾಸದ ನಿಜವಾದ ಉದ್ದೇಶವೆಂದರೆ, ಮನಸ್ಸನ್ನು ಚಿಂತಿಸುವಂತೆ ಉತ್ತೇಜಿಸುವುದು. ಆ ದೃಷ್ಟಿಯಲ್ಲಿ ಕಾಲೇಜು ಶಿಕ್ಷಣ ಆವಶ್ಯಕ."

ಆಲ್ಬರ್ಟ್ ಮತ್ತೆ ಜರ್ಮನಿಗೆ ಹಿಂದಿರುಗುವುದಿಲ್ಲವೆಂದು ತಿಳಿದ ನಾಜಿ ಸರಕಾರ, ಕ್ರೋಧದಿಂದ ಅವರ ಮನೆಯ ಮೇಲೆ ಧಾಳಿ ನಡೆಸಿ, ಅವರ ಬ್ಯಾಂಕಿನ ಕಾಗದ ಪತ್ರಗಳನ್ನೆಲ್ಲಾ ವಶಪಡಿಸಿಕೊಂಡಿತು. ಅಷ್ಟೇ ಅಲ್ಲ, ಅವರ ತಲೆಗೆ ೧೦೦೦೦ ಡಾಲರಿನ ಮೌಲ್ಯ ಎಂದು ಸಾರಿತಂತೆ. ಅದನ್ನು ಕೇಳಿದ ಆಲ್ಬರ್ಟ್ "ಆಹಾ, ನನ್ನ ತಲೆ ಅಷ್ಟು ಬೆಲೆಯುಳ್ಳದ್ದು ಎಂದು ಗೊತ್ತೇ ಇರಲಿಲ್ಲ" ಎಂದರಂತೆ.

ಆಲ್ಬರ್ಟ್ ಭಾಷಣಕ್ಕಾಗಿ ಎಲ್ಲೆಡೆ ಪ್ರಯಾಣ ಮಾಡುತ್ತಿದ್ದರು. ಒಮ್ಮೆ ಅವರ ಹೆಂಡತಿ ಅವರ ಬಟ್ಟೆ ಬರೆಗಳನ್ನೆಲ್ಲಾ ಸೂಟ್‌ಕೇಸ್‌ನಲ್ಲಿ ಚೆನ್ನಾಗಿ ಜೋಡಿಸಿಟ್ಟು, ಹೊರಡುವಾಗ ಅವರಿಗೆ "ನೋಡಿ ಆಲ್ಬರ್ಟ್, ಆ ಕಪ್ಪು ಬಣ್ಣದ ಸೂಟನ್ನು ಸಾಯಂಕಾಲದ ಸಭೆಗೆ ತೊಡುವುದನ್ನು ಮರೆಯಬೇಡಿ. ಒಳ್ಳೆಯ ಶರಟನ್ನು ಧರಿಸಿಕೊಳ್ಳಿ. ಕಾಲು ಚೀಲ ಧರಿಸಿ ಅದರ ಮೇಲೆ ಷೂ ಹಾಕಿಕೊಳ್ಳಿ. ಸಭೆಗೆ ಹೋಗುವ ಮುನ್ನ ತಲೆ ಬಾಚಲು ಮರೆಯಬೇಡಿ" ಇತ್ಯಾದಿ ಸಲಹೆಗಳನ್ನು ಕೊಟ್ಟು, ಮತ್ತೆ ಮತ್ತೆ ಎಚ್ಚರಿಸಿದಳು. ಎಲ್ಲದಕ್ಕೂ ಹೂಗುಟ್ಟಿದರು ಆಲ್ಬರ್ಟ್.

ಅವರು ಊರಿಗೆ ಹಿಂದಿರುಗಿ ಬಂದಾಗ ಸೂಟ್‌ಕೇಸ್‌ನಲ್ಲಿನ ವಿಶೇಷ ಉಡುಪುಗಳೆಲ್ಲ ಹಾಗೇ ಇದ್ದವು. ತುಂಟು ನಗೆ ನಕ್ಕು ಆಲ್ಬರ್ಟ್ ಹೇಳಿದರು: "ಕ್ಷಮಿಸಿಬಿಡು. ನಿನ್ನ ಸಲಹೆಗಳೆಲ್ಲ ಮರೆತೇ ಹೋಯಿತು. ಹೋಗಲಿ ಬಿಡು. ಬಂದವರೆಲ್ಲ ನಾನು ಏನು ಹೇಳುತ್ತೇನೆ ಎಂದು ಕೇಳಲು ಬಂದಿದ್ದರೇ ಹೊರತು ನಾನು ಹೇಗೆ ಅಲಂಕರಿಸಿಕೊಂಡಿದ್ದೇನೆ ಎಂದು ನೋಡಲು ಅಲ್ಲ ತಾನೇ?"

ಪ್ರೇಗ್‌ನಲ್ಲಿ ಒಮ್ಮೆ ಅವರು ಉತ್ತಮ ಭಾಷಣ ಮಾಡಿದ್ದರು. ಸಭಿಕರೆಲ್ಲ ಬುದ್ಧಿವಂತ ಗಣ್ಯವ್ಯಕ್ತಿಗಳು. ಭಾಷಣದ ನಂತರ ವಿಶೇಷ ಆಹ್ವಾನಿತರೊಡನೆ ಸಂದರ್ಶನ ಏರ್ಪಡಿಸಿ ಸಂವಾದಿಸಲು ಕರೆ ಇತ್ತರು. ಆಗ ಆಲ್ಬರ್ಟ್, "ನೋಡಿ, ನಿಮ್ಮ ಮನಸ್ಸನ್ನು ನಾನು ನನ್ನ ಪಿಟೀಲಿನ ವಾದನದ ಮೂಲಕ ಹೆಚ್ಚು ಸಂತೋಷಗೊಳಿಸಬಲ್ಲೆ" ಎಂದು ಪಿಟೀಲು ತೆಗೆದು ನುಡಿಸಿ ಅವರೆಲ್ಲರ ಮೆಚ್ಚುಗೆ ಗಳಿಸಿದರು.

ಒಮ್ಮೆ ಜಪಾನಿನಲ್ಲಿದ್ದಾಗ ಅಲ್ಲಿಯ ಜನರ ಸಭ್ಯತೆ ಅವರಿಗೆ ಬಹಳ ಮೆಚ್ಚುಗೆಯಾಯಿತಂತೆ. ಅಲ್ಲಿ ಒಂದೆಡೆ ನಡೆದ ಸಭೆಯಲ್ಲಿದ್ದ ಯಾರಿಗೂ ಇಂಗ್ಲಿಷ್ ಬರುತ್ತಿರಲಿಲ್ಲವಂತೆ. ತರ್ಜುಮೆಯ ವ್ಯವಸ್ಥೆ ಇರಲಿಲ್ಲವಂತೆ. ಆದರೂ ಇವರ ೪ ಘಂಟೆಗಳ ಭಾಷಣವನ್ನು ತುಂಬ ಶಾಂತರೀತಿಯಿಂದ ನಿಶ್ಶಬ್ದರಾಗಿ ಕುಳಿತು ಕೇಳಿ ಕೈಚಪ್ಪಾಳೆ ತಟ್ಟಿ, ಇವರನ್ನು ಗೌರವಿಸಿದರಂತೆ. ಮಾರನೆಯ ದಿನ ಮತ್ತೊಂದೆಡೆ ಇದೇ ಪರಿಸ್ಥಿತಿ. ಆಲ್ಬರ್ಟ್‌ರು ಅವರ ಮೇಲೆ ಕನಿಕರಗೊಂಡು ಎರಡೇ ಘಂಟೆಯಲ್ಲಿ ತಮ್ಮ ಭಾಷಣವನ್ನು ಮುಗಿಸಿದರಂತೆ. ಆದರೆ ಅಲ್ಲಿಯವರು ನಿರಾಶರಾಗಿ ಅವರ ಬಳಿ ಬಂದು, "ಮಾನ್ಯರೇ, ನಿನ್ನೆ ಆ ಸಭೆಯಲ್ಲಿ ನಾಲ್ಕು ಘಂಟೆ ಮಾತನಾಡಿದಿರಿ. ಆದರೆ ಇಂದು ಎರಡೇ ಘಂಟೆ ಮಾತನಾಡಿ ನಮ್ಮನ್ನು ನಿರಾಶೆಗೊಳಿಸಿದಿರಿ" ಎಂದು ಕಳಕಳಿಯಿಂದ ಹೇಳಿದರಂತೆ.

ಒಬ್ಬ ಸಮಾಜಸೇವಿಕೆ ಹೇಗಾದರೂ ಮಾಡಿ ಆಲ್ಬರ್ಟ್‌ರನ್ನು ತನ್ನ ಮನೆಗೆ ಚಹಾ ಕುಡಿಯಲು ಆಮಂತ್ರಿಸಬೇಕೆಂದು ತೀರ್ಮಾನ ಮಾಡಿದಳು. ಆದರೆ ಆಲ್ಬರ್ಟ್‌ರ ದೃಷ್ಟಿಯಲ್ಲಿ ಅದೆಲ್ಲಾ ಸಮಯ ವ್ಯರ್ಥ. ನಾಜೂಕಾಗಿ ತಮ್ಮ ವಾರದ ಕಾರ್ಯಕ್ರಮವನ್ನೆಲ್ಲ ಹೇಳಿ ಕ್ಷಮೆ ಕೋರಿದರು. ಅವಳೂ ಬಿಡುವಂತಿಲ್ಲ. "ಸರ್, ಶುಕ್ರವಾರ ಸಂಜೆ ಬಿಡುವಿದೆಯಲ್ಲ!" ತಕ್ಷಣ ಹೇಳಿದರು, "ಇಲ್ಲ, ಮೇಡಂ, ನನ್ನ ಸ್ನೇಹಿತ ಡಾ.ಮೈಕೆಲ್‌ಸನ್‌ನೊಂದಿಗೆ ಬಾಹ್ಯಾಕಾಶ ವೀಕ್ಷಣೆಗಾಗಿ ಬಾಹ್ಯಾಕಾಶಕೇಂದ್ರಕ್ಕೆ ಹೋಗಬೇಕಾಗಿದೆ." ಆದರೆ ಅವಳೂ ಅಷ್ಟು ಸುಲಭವಾಗಿ ಬಿಡುವವಳಲ್ಲ. "ಇಲ್ಲ ಸರ್, ಕ್ಯಾಲಿಫೋರ್ನಿಯಾ ವಾತಾವರಣದ ಬಗ್ಗೆ ನಿಮಗೆ ಗೊತ್ತಿಲ್ಲ. ಬಾನುಲಿಕೇಂದ್ರದ ವರದಿಯಂತೆ ಈ ವಾರ ಪೂರ್ತಿ ಮೋಡಗಟ್ಟಿದ ವಾತಾವರಣವಿದ್ದು ಮಳೆ ಬರುತ್ತಿರುತ್ತದೆ. ಆದುದರಿಂದ ನೀವು ನಕ್ಷತ್ರಗಳನ್ನು ನೋಡಲಾಗುವುದಿಲ್ಲ." ಆದರೆ ಆಲ್ಬರ್ಟ್ ಕೂಡ ಅಷ್ಟು ಸುಲಭವಾಗಿ ಸೋಲು ಒಪ್ಪಿಕೊಳ್ಳುವವರಲ್ಲ. ದೊಡ್ಡ ಮುಖಮಾಡಿ ನಗುತ್ತಾ, "ಓ ನನ್ನ ಸ್ನೇಹಿತನ ಬಗ್ಗೆ ನಿಮಗೆ ಗೊತ್ತಿಲ್ಲ. ಅಂದು ಮಳೆ ಬರುವುದಿಲ್ಲ. ಅದಕ್ಕೆಲ್ಲ ಅವನು ಏರ್ಪಾಡು ಮಾಡಿಬಿಟ್ಟಿದ್ದಾನೆ."

ವಿಜ್ಞಾನವು ಜಗತ್ತು ಏನಾಗಿದೆ ಎಂಬುದನ್ನು ಕೇಳುತ್ತದೆ. ಧರ್ಮವು ಮಾನವಕೋಟಿ ಮತ್ತು ಸಮಾಜ ಏನಾಗಬೇಕು ಎಂಬುದನ್ನು ಹೇಳುತ್ತದೆ.

—ಆಲ್ಬರ್ಟ್ ಐನ್‌ಸ್ಟೈನ್

ಒಬ್ಬ ಪುಟ್ಟ ಹುಡುಗಿಗೆ ಒಂದು ದಿನ ಒಂದು ಲೆಕ್ಕ ಮಾಡಲು ಬರಲಿಲ್ಲ. ಹೋಮ್‌ವರ್ಕ್ ಮಾಡಲೇಬೇಕಿತ್ತು. ಅವಳು ಕೇಳಿದ್ದಳು ಹತ್ತಿರದ ಮನೆಯಲ್ಲಿ ದೊಡ್ಡ ಗಣಿತಶಾಸ್ತ್ರಜ್ಞರಿರುವರೆಂದು. ಅವರ ಮನೆಗೆ ಹೋಗಿಯೇಬಿಟ್ಟಳು. ಅವಳು ಕೇಳಿದ ಸಮಸ್ಯೆಗೆ ಸೂಕ್ತರೀತಿಯಲ್ಲಿ ಉತ್ತರಿಸುತ್ತಾ ನಿಧಾನವಾಗಿ ಅವಳಿಗೆ ಅರ್ಥವಾಗುವಂತೆ ಆ ವ್ಯಕ್ತಿ ಹೇಳಿಕೊಟ್ಟರು. ಮನೆಗೆ ಮರಳಿದ ಹುಡುಗಿ ತಾಯಿಯ ಬಳಿ ಆ ವ್ಯಕ್ತಿಯನ್ನು ಕೊಂಡಾಡಿದಳು. ದಿಗ್ಭ್ರಮೆಗೊಂಡ ತಾಯಿ, ಅವರ ಮನೆಗೆ ಓಡಿಹೋಗಿ, "ಮಾನ್ಯರೇ, ನನ್ನ ಮಗಳು ತಾವು ಯಾರೆಂದು ತಿಳಿಯದೆ, ತಮ್ಮ ಅಮೂಲ್ಯ ಸಮಯವನ್ನು ವೃಥಾ ವ್ಯರ್ಥ ಮಾಡಿದಳು. ದಯವಿಟ್ಟು ಕ್ಷಮಿಸಿ" ಎಂದಳು. ತಕ್ಷಣ ಅವರು ಸೌಮ್ಯವಾಗಿ, "ಇಲ್ಲ, ಇಲ್ಲ, ಏನೂ ಅಪರಾಧವಾಗಿಲ್ಲ. ನಮ್ಮಿಬ್ಬರ ಸಂವಾದದಲ್ಲಿ ಅವಳಿಗಿಂತ ನನಗೇ ಹೆಚ್ಚು ವಿಷಯಗಳ ಬಗೆಗಿನ ಅರಿವು ಮೂಡಿತು" ಎಂದರು. ಆ ವ್ಯಕ್ತಿಯೇ ಆಲ್ಬರ್ಟ್.

ಒಮ್ಮೆ ಒಬ್ಬರು ಆಲ್ಬರ್ಟ್‌ರನ್ನು, ಯಶಸ್ವೀ ಜೀವನದ ರಹಸ್ಯವೇನು ಎಂದು ಪ್ರಶ್ನಿಸಿದರು. ಅವರು ತಮ್ಮದೇ ಧಾಟಿಯಲ್ಲಿ, "ಒಂದು ವೇಳೆ Aಯನ್ನು ಯಶಸ್ವೀ ಜೀವನದ ಸಂಕೇತವಾಗಿ ತೆಗೆದುಕೊಂಡರೆ, $A=x+y+z$. ಇಲ್ಲಿ x ಅಂದರೆ ಕಾರ್ಯ ಸಂಕೇತ, y ಅಂದರೆ ಜೀವನದ ಆಟದ ಸಂಕೇತ." ಮಧ್ಯದಲ್ಲೇ ಆ ಮನುಷ್ಯ ಬಾಯಿಹಾಕಿ, z ಅಂದರೆ ಏನು?" ಅಂದನಂತೆ. ಅದಕ್ಕೆ ಅವರು, "ಅದು ನೀವು ಬಾಯಿ ಮುಚ್ಚಿಕೊಂಡಿರಬೇಕಾದ ಸಂಕೇತ" ಎಂದರು.

ಒಮ್ಮೆ *Saturday Review* ಎಂಬ ಪ್ರಸಿದ್ಧ ಪತ್ರಿಕೆ, "ನಾನು ಜೀವನದಲ್ಲಿ ಏನನ್ನು ಕಲಿತೆ?" ಎಂಬುದರ ಬಗ್ಗೆ ಹಲವು ಶ್ರೇಷ್ಠ ವ್ಯಕ್ತಿಗಳನ್ನು ಪ್ರಶ್ನಿಸಿತ್ತು. ಆಲ್ಬರ್ಟ್‌ರನ್ನೂ ಆ ಪ್ರಶ್ನೆ ಕೇಳಲಾಯಿತು. ಅದಕ್ಕೆ ಅವರ ಉತ್ತರ: "ನಾನು ಕೆಳಗಿನ ಮೂರು ಪಾಠಗಳನ್ನು ಕಲಿತಿದ್ದೇನೆ:

೧) ಒಂದು ಪುಟ್ಟ ಮಗುವಿಗೆ ಎಲ್ಲ ವಿಷಯಗಳಲ್ಲಿರುವ ಕುತೂಹಲವನ್ನು ನಾವು ತೀವ್ರ ಗಮನದಿಂದ ಅಭ್ಯಸಿಸುವುದು.

೨) ಇಂದು ಪರಮಾಣು ಶಕ್ತಿಯಿಂದ ವಿಶ್ವವೇ ಪರಿವರ್ತಿತವಾಗಿದ್ದರೂ ಅದನ್ನು ಕುರಿತು ನಮ್ಮಲ್ಲಿ ಯಾವ ಬದಲಾವಣೆಯೂ ಆಗದೇ ಇರುವುದು.

೩) ನನ್ನ ಅನ್ವೇಷಣೆಯಿಂದ ನ್ಯೂಟೋನಿಯಸ್ ಸಿದ್ಧಾಂತಗಳನ್ನು ಮತ್ತೆ ಪರಿಷ್ಕರಿಸಬೇಕಾಯಿತು. ಹಾಗೇ ಮುಂದಿನ ವಿಜ್ಞಾನಿಗಳು, ನನ್ನ ಸಂಶೋಧನೆಗಳ ದೋಷಗಳನ್ನು ಕಂಡುಹಿಡಿದು ಪರಿಷ್ಕರಿಸಬೇಕಾಗುತ್ತದೆ. ಹಾಗಾಗದಿದ್ದಲ್ಲಿ ವಿಜ್ಞಾನ ಸ್ಥಗಿತವಾಗಿಬಿಟ್ಟಿತೆಂದು ಭಾವಿಸಬೇಕಾಗುತ್ತದೆ. ಅದು ಒಳ್ಳೆಯ ಲಕ್ಷಣವಲ್ಲ."

ಅವರ ಜೀವನದಲ್ಲಿ ಮಾನವೀಯತೆ, ಅನುಕಂಪ ಮೊದಲಾದ ಗುಣಗಳು ಎದ್ದು ತೋರುತ್ತಿದ್ದವು. ಒಮ್ಮೆ ಅವರು ಒಂದು ಪುಟ್ಟ ಹಾದಿಯಲ್ಲಿ ಹೋಗಬೇಕಿತ್ತು. ವಾಹನಗಳು ಅಲ್ಲಿ ಸಂಚರಿಸುವುದು ಕಷ್ಟವಾಗಿದ್ದುದರಿಂದ ಮನುಷ್ಯರಿಂದ ಎಳೆಯಲ್ಪಡುವ ರಿಕ್ಷಾಬಂಡಿ ಏರ್ಪಡಿಸಿದ್ದರು. ಅದನ್ನು ಸಮೀಪಿಸಿದ ಅವರು, "ಮನುಷ್ಯನನ್ನು ಪ್ರಾಣಿಯಂತೆ ಉಪಯೋಗಿಸಿ ಅವನ ಆತ್ಮಗೌರವಕ್ಕೆ ಧಕ್ಕೆ ತರುವ ಕೆಲಸವನ್ನು ಎಂದಿಗೂ ಮಾಡಲಾರೆ" ಎಂದು ನಡೆದೇ ಹೋದರು.

ಐನ್‌ಸ್ಟೈನ್‌ರು ಯಾವುದೇ ಒಂದು ಮತ, ಧರ್ಮ ಹಾಗೂ ಆಚರಣೆಗಳಿಗೆ ಕಟ್ಟು ಬೀಳದೆ, ಒಂದು ವಿಧವಾದ ಸ್ವತಂತ್ರ ಮನೋಭಾವವನ್ನೇ ತಳೆದಿದ್ದರು. ಅವರಿಗೆ ಎಲ್ಲ ಮತಗಳ ಮೂಲಭಾವನೆಯ ಬಗ್ಗೆ ಗೌರವವಿತ್ತು. ದೇವರ ಬಗ್ಗೆ ಇವರ ಕಲ್ಪನೆ ಕುತೂಹಲಕರವಾದದ್ದು. ಅವರ ದೃಷ್ಟಿಯಲ್ಲಿ ದೇವರು ಎಂದರೆ ಸತ್ಯ ಸೌಂದರ್ಯಗಳ ಮೂರ್ತರೂಪ ಹಾಗೂ ಆಧ್ಯಾತ್ಮಿಕ ಸ್ವರೂಪಿಯಾದ ಶಕ್ತಿ. ಈ ಶಕ್ತಿ ಅನುಭವಾತೀತವಲ್ಲ. ವಿಶ್ವದ ಅದ್ಭುತ ರಚನೆ ಮತ್ತು ಭವ್ಯತೆ ಈ ಆದಿಶಕ್ತಿಯ ಅರಿವನ್ನು ಮೂಡಿಸುತ್ತವೆ. ಇಂತಹ ಅರಿವು ನಮ್ಮಲ್ಲಿ ಒಂದು ವಿಧವಾದ ಪೂಜ್ಯ ಅಂದರೆ ಆಸ್ತಿಕ ಮನೋಭಾವವನ್ನು ಉಂಟುಮಾಡುತ್ತದೆ ಎಂಬುದು ಅವರ ನಂಬಿಕೆ.

ನ್ಯೂಯಾರ್ಕಿನ ರ್‍ಯಾಬಿ ಗೋಲ್ಡ್‌ಸ್ಟೈನ್ ಎನ್ನುವವರಿಗೆ ಹೇಳಿದರು : "ನಾನು ಸಮಸ್ತ ಅಸ್ತಿತ್ವದ ಸಾಮರಸ್ಯದಲ್ಲಿ ವ್ಯಕ್ತಗೊಳ್ಳುವ ಸ್ಪಿನೋಜಾನ ಭಗವಂತನನ್ನು ನಂಬುತ್ತೇನೆ, ಆದರೆ ಕೇವಲ ಮನುಷ್ಯನ ಕರ್ಮಗಳ ವಿಧಿಯನ್ನು ನಿರ್ಧರಿಸುವ ಭಗವಂತನನ್ನು ಅಲ್ಲ." ಬೆಲ್ ಗ್ಯಾರಿಯಾನ್ ಎನ್ನುವವರಿಗೆ ಹೇಳಿದರು: "ಶಕ್ತಿ (energy)ಯ ಹಿಂದೆ ಯಾವುದೋ ಅಲೌಕಿಕವಾದುದೊಂದಿದೆ ಎನ್ನುವುದನ್ನು ನಾನು ದೃಢವಾಗಿ ನಂಬುತ್ತೇನೆ."

ಪ್ರಪಂಚದ ರೀತಿ ನೀತಿಗಳಿಂದ ಅದರಲ್ಲೂ ಬೆಳೆಯುತ್ತಿರುವ ದ್ವೇಷ, ಹತ್ಯಾಕಾಂಡಗಳಿಂದ ಬೇಸರಗೊಂಡು ಎಲ್ಲದರಿಂದ ದೂರವಿರಬೇಕೆಂದು ಜಪಾನಿಗೆ ಹೋದರಂತೆ ಆಲ್ಬರ್ಟ್. ಅಲ್ಲಿರುವಾಗ ಎಲ್ಲ ಸಮಾರಂಭಗಳಿಂದ ದೂರವಿದ್ದುಕೊಂಡು, ಯಾವಾಗಲೂ ತಮ್ಮೆಲ್ಲ ಸಮಯವನ್ನು ಮುಗ್ಧ ಮಕ್ಕಳೊಡನೆ ಕಳೆಯುತ್ತಿದ್ದರಂತೆ. ಅವರುಗಳು ಬರೆದುಕೊಡುತ್ತಿದ್ದ ಚಿತ್ರಗಳನ್ನೆಲ್ಲ ಸಂತೋಷದಿಂದ ಸ್ವೀಕರಿಸಿ, ಅವರ ಮುದ್ದು ಮಾತುಗಳಲ್ಲಿ ತಮ್ಮನ್ನು ತಾವೇ ಮರೆಯುತ್ತಿದ್ದರು. ಅವರು ಹೇಳಿದರು, "ನಮ್ಮ ಪ್ರಪಂಚದ ಭವಿಷ್ಯ ಈ ಮುದ್ದು ಮಕ್ಕಳ ಮನಸ್ಸಿನ ಬೆಳವಣಿಗೆಯ ಮೇಲೆ ನಿಂತಿದೆ. ಅವರು ಒಬ್ಬರು ಮತ್ತೊಬ್ಬರನ್ನು ದ್ವೇಷಿಸದಂತೆ ಬೆಳೆಸಬೇಕು. ಮಾನವ ಜಾತಿ ಸಂಪಾದಿಸಿರುವ ವಿಜ್ಞಾನದ ಆವಿಷ್ಕಾರಗಳನ್ನು ಒಳ್ಳೆಯದಕ್ಕೆ ಉಪಯೋಗಿಸುವಂತೆ ಅವರನ್ನು ಬೆಳೆಸಬೇಕು." ಮಕ್ಕಳನ್ನು ನೋಡುತ್ತಾ ಹೇಳಿದರಂತೆ, "ಪುಟಾಣಿಗಳಾ, ನೀವು ಎಂಥಾ ಜೀವನ ನಡೆಸಬೇಕೆಂದರೆ ಅದು ನಿಮ್ಮ ಹಿರಿಯರಾದ ನಾವೆಲ್ಲ ನಾಚಿಕೆ ಪಡುವಂಥದ್ದಾಗಿರಬೇಕು."

ಅವರ ಕೊಠಡಿಯಲ್ಲಿ ಕೇವಲ ಮೂರು ವ್ಯಕ್ತಿಗಳ ಚಿತ್ರಪಟಗಳಿದ್ದುವೆಂಬುದನ್ನು ಅರಿಯಲು ಆಶ್ಚರ್ಯವಾಗುತ್ತದೆ. ಅವುಗಳೆಂದರೆ, ಫ್ಯಾರೆಡೆ, ಮ್ಯಾಕ್ಸ್‌ವೆಲ್ ಹಾಗೂ ಗಾಂಧೀಜಿ. ಅವರು ಒಮ್ಮೆ ಹೇಳಿದರು, "ನಮ್ಮ ಕಾಲದ ಅತ್ಯಂತ ಸತ್ಯವಂತ ರಾಜಕೀಯ ವ್ಯಕ್ತಿ ಎಂದರೆ ಮಹಾತ್ಮಾ ಗಾಂಧಿ ಮಾತ್ರ. ಅವರು ನಿಜವಾಗಿ ನಮ್ಮ ಕಾಲದ ಗರಿಷ್ಠವ್ಯಕ್ತಿ." ಗಾಂಧೀಜಿಯ ಹತ್ಯೆಯ ವಾರ್ತೆ ಕೇಳಿ ಹೇಳಿದರು : "ಇಂತಹ ಒಬ್ಬ ವ್ಯಕ್ತಿ ಎಂದಾದರೂ ಈ ನೆಲದ ಮೇಲೆ ಓಡಾಡಿದ್ದರು ಎಂದು ಮುಂದಿನ ಜನಾಂಗಕ್ಕೆ ಬಹುಶಃ ನಂಬುವುದಕ್ಕೆ ಅಸಾಧ್ಯವಾಗುತ್ತದೆ."

ವಿಶ್ವಯುದ್ಧದ ಬಳಿಕ ಅವರು ಏಕಾಂತವಾಗಿ ಬಾಳಲು ಬಯಸಿದರು. ತಮ್ಮ ಕೊನೆಯ ದಿನದವರೆಗೂ ಆ ಏಕಾಂತದಲ್ಲಿ ತಮ್ಮ ಯೂನಿಫೈಡ್ ಸಿದ್ಧಾಂತ(unified theory) ಬಗ್ಗೆ ಆಲೋಚಿಸುತ್ತಿದ್ದರು. ೧೯೫೫ರಲ್ಲಿ ಅನಾರೋಗ್ಯದಿಂದ ನರಳುತ್ತಿದ್ದರೂ ಅದನ್ನು ಯಾರಿಗೂ ಹೇಳಲಿಲ್ಲ. ಏಪ್ರಿಲ್ ೧೮, ೧೯೫೫ರಲ್ಲಿ ಆ ಮಹಾ ಭೌತಶಾಸ್ತ್ರ ಮೇಧಾವಿ ತನ್ನ ಕೊನೆಯುಸಿರೆಳೆದರು.

ಐನ್‌ಸ್ಟೈನ್‌ರು ತಮ್ಮ ಇಡೀ ಜೀವನಕ್ಕೆ ಸ್ಫೂರ್ತಿ ಮತ್ತು ಮಾರ್ಗದರ್ಶನ ನೀಡಿದ ಉದಾತ್ತ ಮೌಲ್ಯಗಳ ಬಗ್ಗೆ ಈ ರೀತಿ ನುಡಿದಿದ್ದಾರೆ, "ನನ್ನ ಜೀವನದ ಹಾದಿಯನ್ನು ಬೆಳಗಿಸಿ, ಹಸನ್ಮುಖಿಯಾಗಿಸಿ ಮತ್ತೆ ಮತ್ತೆ ಜೀವನವನ್ನು ಎದುರಿಸಲು ಧೈರ್ಯ ತಂದುಕೊಟ್ಟ ಪರಮ ಮೌಲ್ಯಗಳೆಂದರೆ ದಯೆ, ಸೌಂದರ್ಯ ಮತ್ತು ಸತ್ಯ."